**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ**

**ಸಿ.ಸಿ.ನಂ.4285/2022**

**ಫಿರ್ಯಾದಿದಾರ :** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿ** : 1. ಗಜಾನನ ತಂದೆ ಗುರಪ್ಪ ಶಿವಣಗಿ
ವಯಸ್ಸು : 47 ವರ್ಷ ಉ: ಚಾಲಕ
ಸಾ:ಸಿಂದಗಿ

- - -

**ಆರೋಪಣೆ**

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಗಜಾನನ ತಂದೆ ಗುರಪ್ಪ ಶಿವಣಗಿ
ವಯಸ್ಸು : 47 ವರ್ಷ ಉ: ಚಾಲಕ
ಸಾ:ಸಿಂದಗಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ** ಆರೋಪಣೆ ಏನೆಂದರೆ :

ದೇವರ ಹಿಪ್ಪರಗಿ ಪೋಲಿಸ್ ಠಾಣೆಯ ಹದ್ದಿನ ಪೈಕಿ ದೇವರ ಹಿಪ್ಪರಗಿ ಠಾಣೆಯಿಂದ ಪಶ್ಚಿಮಕ್ಕೆ ಅಂದಾಜು 1 ಕಿ ಮೀ ಅಂತರದ ಮೇಲೆ ವಿಜಯಪುರ- ಕಲಬುರ್ಗಿ ಹೋಗುವ ಎನ್ ಎಚ್ 50 ಸಾರ್ವಜನಿಕ ರಸ್ತೆಯ ಮೇಲೆ ದೇವರ ಹಿಪ್ಪರಗಿಯ ವೆಲ್ ಕಮ್ ಪ್ಯಾಮಿಲಿ ರೆಸ್ಟೊರೆಂಟ ಹತ್ತಿರ ದಿನಾಂಕ 08-05-2022 ರಂದು ರಾತ್ರಿ 09-15 ಗಂಟೆಗೆ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಟವರಸ್ ಲಾರಿ ನೊಂದಣಿ ಸಂಖ್ಯೆ ಕೆಎ/32/ಡಿ/9416 ನೇದ್ದನ್ನು ಸಿಂದಗಿ ಕಡೆಯಿಂದ ವಿಜಯಪೂರ ಕಡೆಗೆ ಅತೀ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸುತ್ತಾ ಬಂದವನೇ ತನ್ನ ಲಾರಿಯ ಮುಂದೆ ಹೋಗುತ್ತಿದ್ದ ವಾಹನಗಳಿಗೆ ಓವರಟೇಕ್ ಮಾಡಿ ಮುಂದೆ ಹೋಗಲು ತನ್ನ ಲಾರಿಯನ್ನು ರಾಂಗ್ ಸೈಡಿನಲ್ಲಿ ತೆಗೆದುಕೊಂಡು ಬಂದು ಪಿರ್ಯಾದಿಯ ಗಂಡ ಬಸಪ್ಪ ಕಲಬುರ್ಗಿ ಈತನು ಶಿವಣಗಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ಹೊಂಡಾ ಕಂಪನಿಯು ಶೈನ ಮೋಟಾರ್ ಸೈಕಲ್ ನಂಬರ ಕೆಎ/28/ಇಝಡ್/7655 ನೇದ್ದರ ಮೇಲೆ ಬರುತ್ತಿದ್ದಾಗ ಸದರ ಮೋಟಾರ್ ಸೈಕಲಕ್ಕೆ ಎದುರಿನಿಂದ ಡಿಕ್ಕಿಪಡಿಸಿ ಅಪಘಾತಪತಡಿಸಿದ್ದು ಇದರಿಂದ ಅವನ ಹಣೆಯ ಮೇಲೆ ಓಳಪೆಟ್ಟು, ಮೇಲಿನ ತುಟಿಗೆ ಗಾಯ, ಬಲಗೈ ಹಿಡಿಕಿಯ ಹತ್ತಿರ ಎರಡು ಕಾಲುಗಳ ತೊಡೆ ಹತ್ತಿರ ಭಾರಿ ಒಳಪೆಟ್ಟುಗಳು ಆಗಿದ್ದು ಆ

ಮೂಲಕ ಭಾ.ದಂ.ಸಂ.ಕಲಂ.279 ಐಪಿಸಿ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಟವರಸ್ ಲಾರಿ ಅತೀ ವೇಗ ಅಥವಾ ದುಡುಕುತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸಿಕೊಂಡು ಮೋಟಾರ್ ಸೈಕಲಗೆ ಡಿಕ್ಕಿಪಡಿಸಿ ಅಪಘಾತಪಡಿಸಿ ಫಿರ್ಯಾದಿಯ ಗಂಡ ಬಸಪ್ಪ ಇತನನನ್ನು ವಿಜಯಪೂರದ ಬಿ ಎಲ್ ಡಿ ಇ ಆಸ್ಪತ್ರೆಗೆ 108 ಆ್ಯಂಬುಲೇನ್ಸದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ವಿಜಯಪೂರದ ಗಾಂಧಿ ಚೌಕ ಹತ್ತಿರ ರಾತ್ರಿ 10.45 ಗಂಟೆಗೆ ಮರಣ ಹೊಂದಿದ್ದು ಆ ಮೂಲಕ ಭಾ.ದಂ.ಸಂ.ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಟವರಸ ಲಾರಿ ಸ್ಥಳದಲ್ಲಿಯೇ ಬಿಟ್ಟು ಅಪಘಾತದ ಸಂಗತಿಯನ್ನು ಪೋಲಿಸ್ ಠಾಣೆಗೆ ತಿಳಿಸದೇ ಓಡಿ ಹೋಗಿ ಆ ಮೂಲಕ ಭಾರತೀಯ ಮೋಟಾರ್ ವಾಹನ ಅಧಿನಿಯಮ ಕಲಂ.187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ07-03-2023 ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿಂದಗಿ

## ಆಪಾದಿತರ ಹೇಳಿಕೆ

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ ಃ

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,

ದಿನಾಂಕಃ07-03-2023 ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**